## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 2003 |
| ಮಾನ್ಯ ಸದಸ್ಯರ ಹೆಸರು | ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | 24.03.2021 |
| ಉತ್ತರಿಸುವ ಸಚಿವರು | ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಸಿವಿಲ್ ಸೇವೆಗಳಿಗೆ ಆಯ್ಕೆ ಆದ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ನೇಮಕಾತಿ ಮಾಡುವ ಮುನ್ನ ಜಾತಿ ಆದಾಯ, ಸಿಂಧುತ್ವ ಪ್ರಮಾಣ ಪತ್ರ ಪಡೆಯುವುದು ಕಡ್ಡಾಯವಲ್ಲವೇ; | ರಾಜ್ಯದ ಸಿವಿಲ್ ಸೇವೆಗಳಲ್ಲಿ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಮೀಸಲಾತಿಯಡಿ ಆಯ್ಕೆಯಾದಲ್ಲಿ ಸಿಂಧುತ್ವ ಪ್ರಮಾಣ ಪತ್ರವನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ. |
| ಆ) | ಕಳೆದ ಮೂರು ವರ್ಷಗಳಲ್ಲಿ ಎಷ್ಟು ಅಭ್ಯರ್ಥಿಗಳ ಜಾತಿ ಆದಾಯ, ಸಿಂಧುತ್ವ ಪ್ರಮಾಣ ಪತ್ರಗಳನ್ನು ನೀಡಲಾಗಿದೆ; ಮತ್ತು ಅಸಿಂಧುಗೊಳಿಸಲಾದ ಅಭ್ಯರ್ಥಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರವನ್ನು ನೀಡುವುದು) | ಕಳೆದ ಮೂರು ವರ್ಷಗಳಲ್ಲಿ ಹಿಂದುಳಿದ ವರ್ಗಗಳ ಅಭ್ಯರ್ಥಿಗಳ ಜಾತಿ ಮತ್ತು ಆದಾಯ, ಸಿಂಧುತ್ವ ಪ್ರಮಾಣ ಪತ್ರಗಳನ್ನು ನೀಡಲಾಗಿರುವ ಮತ್ತು ಅಸಿಂಧುಗೊಳಿಸಲಾದ ಅಭ್ಯರ್ಥಿಗಳ ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| ಇ) | ಜಿಲ್ಲಾ ಆದಾಯ ಸಿಂಧುತ್ವ ಪ್ರಮಾಣ ಪತ್ರಗಳನ್ನು ನೀಡುವ ವೇಳೆ ನಿಗದಿಪಡಿಸಿದ ಆದಾಯ ಮಿತಿಗಿಂತ ಹೆಚ್ಚಾಗಿರುವ ಅಭ್ಯರ್ಥಿಗಳಿಗೆ ಸುಳ್ಳು ವರದಿಗಳನ್ನು ನೀಡಿ ಸಿಂಧುತ್ವ ಪ್ರಮಾಣ ಪತ್ರಗಳನ್ನು ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಜಿಲ್ಲಾ ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿಯು ಜಾತಿ ಮತ್ತು ಆದಾಯ ಪ್ರಮಾಣ ಪತ್ರದ ಸಿಂಧುತ್ವ ಪ್ರಮಾಣ ಪತ್ರವನ್ನು ವಿತರಿಸುವ ಸಕ್ಷಮ ಪ್ರಾಧಿಕಾರವಾಗಿದ್ದು, ಮೀಸಲಾತಿ ಮಿತಿಯಲ್ಲಿರುವ ಅರ್ಹ ಅಭ್ಯರ್ಥಿಗಳಿಗೆ ಸಿಂಧುತ್ವ ಪ್ರಮಾಣ ಪತ್ರವನ್ನು ವಿತರಿಸಲಾಗುತ್ತಿರುತ್ತದೆ. |
| ಈ) | ಬಂದಿದ್ದಲ್ಲಿ, ಅಂತಹ ಅಧಿಕಾರಿಗಳ/ ಸಿಬ್ಬಂದಿಯ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಅನ್ವಯಿಸುವುದಿಲ್ಲ |

**ಸಂಖ್ಯೆ**:ಹಿಂವಕ 90 ಬಿಸಿಎ 2021

(ಕೋಟ ಶ್ರೀನಿವಾಸ ಪೂಜಾರಿ)
ಮುಜರಾಯಿ ಮತ್ತು ಹಿಂದುಳಿದ ವರ್ಗಗಳ
ಕಲ್ಯಾಣ ಸಚಿವರು

ಅನುಬಂಧ

ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಯು.ಬಿ ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು) ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2003 ಕ್ಕೆ ಉತ್ತರ

| ಕ್ರ.ಸಂ | ಜಿಲ್ಲೆಯ ಹೆಸರು | ವಿತರಣೆ ಮಾಡಿದ ಸಿಂಧುತ್ವ ಪ್ರಮಾಣ ಪತ್ರಗಳು | | | ಅಸಿಂದುಗೊಳಿಸಿದ ಸಿಂಧುತ್ವ ಪ್ರಮಾಣ ಪತ್ರಗಳು | | |
|---|---|---|---|---|---|---|---|
| | | 2018-19 | 2019-20 | 2020-21 | 2018-19 | 2019-20 | 2020-21 |
| 1 | ಚಿಕ್ಕಬಳ್ಳಾಪುರ | 137 | 96 | 82 | 0 | 0 | 0 |
| 2 | ಕೋಲಾರ | 184 | 169 | 144 | 1 | 0 | 1 |
| 3 | ರಾಮನಗರ | 143 | 125 | 70 | 0 | 0 | 0 |
| 4 | ಉಡುಪಿ | 85 | 70 | 51 | 0 | 0 | 0 |
| 5 | ಬೆಂಗಳೂರು ಗ್ರಾಮಾತರ | 99 | 74 | 57 | 0 | 1 | 0 |
| 6 | ಕಲಬುರಗಿ | 778 | 488 | 268 | 0 | 0 | 0 |
| 7 | ದಕ್ಷಿಣ ಕನ್ನಡ | 81 | 91 | 53 | 0 | 0 | 0 |
| 8 | ಬೀದರ್ | 227 | 92 | 103 | 0 | 0 | 0 |
| 9 | ಗದಗ | 201 | 201 | 201 | 0 | 0 | 0 |
| 10 | ಚಿಕ್ಕಮಗಳೂರು | 257 | 267 | 119 | 0 | 0 | 0 |
| 11 | ಬೆಳಗಾವಿ | 1212 | 1118 | 874 | 0 | 11 | 0 |
| 12 | ತುಮಕೂರು | 379 | 361 | 256 | 0 | 0 | 1 |
| 13 | ಬಳ್ಳಾರಿ | 609 | 378 | 213 | 0 | 1 | 0 |
| 14 | ಕೊಪ್ಪಳ | 421 | 373 | 237 | 2 | 0 | 0 |
| 15 | ಬೆಂಗಳೂರು | 291 | 297 | 223 | 0 | 0 | 0 |
| 16 | ವಿಜಯಪುರ | 845 | 775 | 440 | 0 | 3 | 2 |
| 17 | ದಾವಣಗೆರೆ | 99 | 74 | 57 | 0 | 1 | 0 |
| 18 | ಶಿವಮೊಗ್ಗ | 310 | 288 | 173 | 0 | 0 | 2 |
| 19 | ಬಾ3ಗಲಕೋಟೆ | 726 | 783 | 778 | 2 | 4 | 4 |
| 20 | ಮೈಸೂರು | 346 | 324 | 258 | 1 | 1 | 3 |
| 21 | ಉತ್ತರ ಕನ್ನಡ | 205 | 341 | 125 | 0 | 0 | 0 |
| 22 | ಚಿತ್ರದುರ್ಗ | 381 | 397 | 219 | 0 | 0 | 0 |
| 23 | ಮಂಡ್ಯ | 329 | 302 | 121 | 6 | 1 | 5 |
| 24 | ಹಾಸನ | 475 | 414 | 333 | 0 | 1 | 4 |
| 25 | ಹಾವೇರಿ | 310 | 218 | 138 | 0 | 0 | 0 |
| 26 | ಚಾಮರಾಜನಗರ | 98 | 92 | 71 | 0 | 0 | 0 |
| 27 | ಯಾದಗಿರಿ | 99 | 74 | 57 | 0 | 1 | 0 |
| 28 | ಧಾರವಾಡ | 217 | 160 | 101 | 5 | 3 | 0 |
| 29 | ರಾಯಚೂರು | 426 | 410 | 308 | 0 | 1 | 0 |
| 30 | ಕೊಡಗು | 51 | 42 | 20 | 0 | 0 | 0 |
| | ಒಟ್ಟು | 10021 | 8894 | 6150 | 17 | 29 | 22 |

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಯು.ಬಿ.ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2003 ಕ್ಕೆ ಪೂರಕ ಟಿಪ್ಪಣಿ**

********

ಭಾರತದ ಸಂವಿಧಾನ ಅನುಚ್ಛೇಧ 15(4) ಮತ್ತು 16(4) ರನ್ವಯ ವಿದ್ಯಾ ಸಂಸ್ಥೆಗಳಲ್ಲಿ ಪ್ರವೇಶ ಮತ್ತು ನೇಮಕಾತಿಗಳಲ್ಲಿ ಮೀಸಲಾತಿಯನ್ನು ಕಲ್ಪಿಸಲಾಗಿರುತ್ತದೆ. ಅದರಂತೆ ರಾಜ್ಯ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000, ದಿನಾಂಕ: 30.03.2002 ರನ್ವಯ ಪ್ರವರ್ಗವಾರು ಮೀಸಲಾತಿಯನ್ನು ನಿಗಧಿಪಡಿಸಿ ಆದೇಶಿಸಲಾಗಿರುತ್ತದೆ.

ರಾಜ್ಯದ ಸಿವಿಲ್ ಸೇವೆಗಳಿಗೆ ಆಯ್ಕೆಯಾದ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳ (ನೇಮಕಾತಿ ಮೀಸಲಾತಿ ಇತ್ಯಾದಿ) ಅಧಿನಿಯಮ -1990 ಮತ್ತು ನಿಯಮಗಳು -1992 ರನ್ವಯ ಜಾತಿ ಮತ್ತು ಆದಾಯ ಪ್ರಮಾಣ ಪತ್ರದ ಸಿಂಧುತ್ವ ಪ್ರಮಾಣ ಪತ್ರವನ್ನು ಜಿಲ್ಲಾ ಹಂತದ ಜಿಲ್ಲಾ ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿಯಿಂದ ವಿತರಿಸಲು ಕ್ರಮವಹಿಸಲಾಗಿರುತ್ತದೆ.

--------